**ದಿನಾಂಕ 07.11.2020 ರಂದು ಸಮಯ 11.00 ಗಂಟೆಗೆ ವಾರ್ಡ್ 154-ಬಸವನಗುಡಿ ವಾರ್ಡಿಗೆ ಸಂಬಂಧಿಸಿದಂತೆ ವಿವಿದ್ದೋದ್ದೇಶ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ಹಾಜರಿದ್ದವರು

1. ಶ್ರೀ ಮಂಜುನಾಥ ರೆಡ್ಡಿ, ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು ವಾರ್ಡ್ 154
2. ಶ್ರೀ. ಆನಂದ.ಜಿ, ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ 154 ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀ. ಎನ್. ನಾರಾಯಣ್, ಕಂದಾಯ ಪರಿವೀಕ್ಷಕರು, ವಾರ್ಡ್ 154
4. ಶ್ರೀ. ಹೇಮಂತ್ ಕುಮಾರ್. ಕೆ.ಹೆಚ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 154
5. ಶ್ರೀ. ರಾಜೇಂದ್ರಪ್ರಸಾದ್. ಸಿ, ಸಬ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಠಾಣೆ
6. ಶ್ರೀ. ಹೊನ್ನನಂಜಯ್ಯ, ಎ.ಎಸ್.ಐ ಬಸವನಗುಡಿ ಸಂಚಾರಿ ಠಾಣೆ
7. ಶ್ರೀ. ಕಿರಣ್ ಕುಮಾರ್, ಸಹಾಯಕ ಅಭಿಯಂತರರು, ಬೆಸ್ಕಾಂ
8. ಶ್ರೀ. ಕೃಷ್ಣಮೂರ್ತಿ.ಎಂ, ಕಿರಿಯ ಅಭಿಯಂತರರು, BESCOM ವಾರ್ಡ್ 154
9. ಡಾ।। ಪ್ರಕೃತಿ, ವೈದ್ಯಾಧಿಕಾರಿ, ವಾರ್ಡ್ 154
10. ಶ್ರೀ.ಹೆಚ್. ಗೋಪಾಲಕೃಷ್ಣ, ಕಂದಾಯ ವಸೂಲಿಗಾರರು ವಾರ್ಡ್ 154

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ಅಧಿಕಾರಿಗಳಗೆ ಸ್ವಾಗತವನ್ನು ಕೋರುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಅಧ್ಯಕ್ಷರಾದ ಶ್ರೀ ಮಂಜುನಾಥ ರೆಡ್ಡಿ ರವರು ಪ್ರತಿ ತಿಂಗಳ ಮೊದಲನೇ/ಮೂರನೇ ಶನಿವಾರ ನಡೆಸಬೇಕೆಂದು ತಿಳಿಸಿರುವ ಮೇರೆಗೆ ದಿನಾಂಕ: 07.11.2020 ರಂದು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1) ನೋಡಲ್ ಅಧಿಕಾರಿಗಳು ಮಾತನಾಡಿ 2ನೇ ಮುಖ್ಯರಸ್ತೆ ತ್ಯಾಗರಾಜನಗರ, ಗಂಗಮ್ಮ ದೇವಸ್ಥಾನದ ರಸ್ತೆ, ದತ್ತಾತ್ರೇಯ ದೇವಸ್ಥಾನದ ರಸ್ತೆ, ಮುನೇಶ್ವರ ರಸ್ತೆಗಳಲ್ಲಿ ಬೆಸ್ಕಾಂ HD ಕೇಬಲ್‌ಗಳನ್ನು ಅಳವಡಿಸಲು ಅಗೆದಿರುವ ರಸ್ತೆಗಳನ್ನು ಕೂಡಲೇ ದುರಸ್ಥಿ ಕೆಲಸವನ್ನು ಪೂರ್ಣಗೊಳಿಸಲು ದಿನಾಂಕ: 03-10-2020 ಮತ್ತು 17-10-2020 ರಂದು ನಡೆದ ಸಭೆಯಲ್ಲಿ ದುರಸ್ಥಿ ಕಾರ್ಯ ಕೈಗೊಳ್ಳಲು ಕೋರಲಾಗಿತ್ತು. ಆದರೆ ಇದುವರೆವಿಗೂ ಯಾವುದೇ ರೀತಿ ಕ್ರಮಗಳನ್ನು ಕೈಗೊಂಡಿರುವುದಿಲ್ಲ ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು ಶೀಘ್ರವಾಗಿ HD ಕೇಬಲ್‌ಗಳನ್ನು ಅಳವಡಿಸಲು ಅಗೆದಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಳ್ಳಲು ಈ ಮೂಲಕ ಕೋರಲಾಗಿದೆ.

**ಕ್ರಮ: - ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಅವಲಹಳ್ಳಿ ಉಪ ವಿಭಾಗ ಬೆಸ್ಕಾಂ ರವರಿಗೆ ಕ್ರಮ ವಹಿಸಲು ಕೋರಲಾಗಿರುತ್ತದೆ.**

2) ನೋಡಲ್ ಅಧಿಕಾರಿಗಳು ಮಾತನಾಡಿ ಸುಬ್ಬರಾಮಚೆಟ್ಟಿ ರಸ್ತೆಯಲ್ಲಿರುವ Road Median ಗೆ Reflectors ಗಳನ್ನು ಅಳವಡಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ದಿನಾಂಕ: 17-10-2020 ರಂದು ನಡೆದ ಸಭೆಯಲ್ಲಿ ಕೋರಲಾಗಿತ್ತು. ಸದರಿ ರಸ್ತೆಯಲ್ಲಿ Road Median ಗೆ Reflectors ಗಳನ್ನು ಅಳವಡಿಸಲಾಗಿರುತ್ತದೆ ಎಂದು ಸಂಬಂಧಪಟ್ಟ ಬಸವನಗುಡಿ ಸಂಚಾರಿ ಪೋಲೀಸ್ ಠಾಣೆಯ ಶ್ರೀ. ರಾಜೇಂದ್ರಪ್ರಸಾದ್. ಸಿ, ಸಬ್‌ಇನ್ಸ್‌ಪೆಕ್ಟರ್ ರವರು ತಿಳಿಸಿರುತ್ತಾರೆ.

3) ನೋಡಲ್ ಅಧಿಕಾರಿಗಳು ಮಾತನಾಡಿ ಬ್ಯೂಗಲ್ ರಾಕ್ ಪಾರ್ಕ್‌ನಲ್ಲಿ ಹಾಗೂ 9ನೇ ಅಡ್ಡರಸ್ತೆ ಎನ್.ಆರ್.ಕಾಲೋನಿಯಲ್ಲಿ ಬೀದಿ ನಾಯಿಗಳ ಹಾವಳಿ ತುಂಬಾ ಇರುವುದರಿಂದ ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದರಿಂದ ಸದರಿ ವಿಷಯವಾಗಿ ಅಗತ್ಯ ಕ್ರಮಕೈಗೊಳ್ಳಲು ಈ ಮೂಲಕ ಸೂಚಿಸಲಾಗಿರುತ್ತದೆ.

**ಕ್ರಮ: ಸಹಾಯಕ ನಿರ್ದೇಶಕರು (ದಕ್ಷಿಣ) ಪಶುಪಾಲನಾ ಇಲಾಖೆ, ಬಿ.ಬಿ.ಎಂ.ಪಿ ರವರಿಗೆ ಕ್ರಮ ವಹಿಸಲು ಕೋರಲಾಗಿರುತ್ತದೆ.**

>>>>2

Scanned with CamScanner

4) ನೋಡಲ್ ಅಧಿಕಾರಿಗಳು ಮಾತನಾಡಿ ಈ.ಎ.ಟಿ ರಸ್ತೆಯಲ್ಲಿ ಹಾಗೂ ಒಂದನೇ ಮುಖ್ಯರಸ್ತೆ ತ್ಯಾಗರಾಜನಗರದಲ್ಲಿ ತಳ್ಳುವ ಗಾಡಿಯವರು ರಸ್ತೆಯಲ್ಲಿ ನಿಲ್ಲಿಸಿ ವ್ಯಾಪಾರ ಮಾಡುತ್ತಿರುವುದಾಗಿ ಸಾರ್ವಜನಿಕರಿಂದ ಆಗ್ಗಾಗ್ಗೆ ದೂರುಗಳು ಬರುತ್ತಿದ್ದು ಸದರಿ ವಿಷಯವಾಗಿ ಅಗತ್ಯ ಕ್ರಮಕೈಗೊಳ್ಳಲು ಈ ಮೂಲಕ ಸೂಚಿಸಲಾಗಿರುತ್ತದೆ.

**ಕ್ರಮ: ವಾರ್ಡಿನ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಿರಿಯ ಅಭಿಯಂತರರು (ಬ.ಗು) ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.**

5) ನೋಡಲ್ ಅಧಿಕಾರಿಗಳು ಮಾತನಾಡಿ ಪ್ರತಿ ವರ್ಷದಂತೆ ಈ ವರ್ಷದ ಕಾರ್ತೀಕ ಮಾಸದ ಕೊನೆಯ ಕಾರ್ತೀಕ ಸೋಮವಾರದಂದು ಬಸವನಗುಡಿಯ ದೊಡ್ಡಬಸವಣ್ಣ ದೇವಸ್ಥಾನದಲ್ಲಿ ನಡೆಯುವ ಐತಿಹಾಸಿಕ ಕಡಲೆಕಾಯಿ ಪರಿಷೆಯನ್ನು ಕೋವಿಡ್-19 ಸೋಂಕು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಈ ಐತಿಹಾಸಿಕ ಕಡಲೆಕಾಯಿ ಪರಿಷೆಯಲ್ಲಿ ದಿನಕ್ಕೆ ಸುಮಾರು 30 ರಿಂದ 40 ಸಾವಿರ ಜನ ಸೇರುವ ನಿರೀಕ್ಷೆ ಇರುವುದರಿಂದ ಕೋವಿಡ್-19 ಇನ್ನೂ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಇದನ್ನು ಕೋವಿಡ್-19 ಸೋಂಕನ್ನು ತಡೆಯುವ ಹಿನ್ನಲೆಯಲ್ಲಿ ಸದರಿ ಕಡಲೆಕಾಯಿ ಪರಿಷೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಆಚರಿಸುವುದು ಸೂಕ್ತವಾಗಿರುವುದಿಲ್ಲ, ಸಾರ್ವಜನಿಕರ ಆರೋಗ್ಯದ ದೃಷ್ಠಿಯಿಂದ ಹಾಗೂ ಸೋಂಕನ್ನು ತಡೆಗಟ್ಟುವ ನಿಟ್ಟಿನಲ್ಲಿ ಸದರಿ ಕಡಲೆಕಾಯಿ ಪರಿಷೆಯನ್ನು ದೇವಸ್ಥಾನದ ಪೂಜಾ ವಿಧಿವಿಧಾನಗಳಂತೆ ಸರಳವಾಗಿ ದೇವಸ್ಥಾನದ ಮಟ್ಟದಲ್ಲೇ ಆಚರಿಸಿಕೊಂಡು ಯಾವುದೇ ಅಂಗಡಿ ಮುಂಗಟ್ಟುಗಳನ್ನು ಹಾಕದಂತೆ ನೋಡಿಕೊಂಡು ಸಹಕರಿಸಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

**ಕ್ರಮ: ಕಾರ್ಯನಿರ್ವಾಹಕ ಅಧಿಕಾರಿ, ದೊಡ್ಡಬಸವಣ್ಣ ದೇವಸ್ಥಾನ ಧಾರ್ಮಿಕ ದತ್ತಿ ಇಲಾಖೆ ರವರಿಗೆ ಸಹಕರಿಸಲು ಕೋರಲಾಗಿದೆ.**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

11/11/2020

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ 154-ಬಸವನಗುಡಿ

10/11

<u>ಪ್ರತಿಯನ್ನು:</u>

1) ಮಾನ್ಯ ಆಯುಕ್ತರು ರವರ ಆಪ್ತ ಶಾಖೆಗೆ ಅವಗಾಹನೆಗೆ ತರಲು ಕಳುಹಿಸಿದೆ.
2) ವಲಯ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
3) ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
4) ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ.
5) ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
6) ಸಹಾಯಕ ನಿರ್ದೇಶಕರು (ದಕ್ಷಿಣ) ಪಶುಪಾಲನಾ ಇಲಾಖೆ, ಬಿ.ಬಿ.ಎಂ.ಪಿ ರವರ ಅವಗಾಹನೆಗೆ.
7) ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
8) ಕಾರ್ಯನಿರ್ವಾಹಕ ಅಧಿಕಾರಿಗಳು, ದೊಡ್ಡಬಸವಣ್ಣ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ ರವರ ಅವಗಾಹನೆಗೆ.
9) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಅವಲಹಳ್ಳಿ ಉಪ ವಿಭಾಗ ರವರ ಅವಗಾಹನೆಗೆ.
10) ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ ರವರ ಅವಗಾಹನೆಗೆ.
11) ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
12) ಕಛೇರಿ ಕಡತಕ್ಕೆ.

Scanned with CamScanner